**ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂಡಾಧಿಕಾರಿಗಳು, ಬನಹಟ್ಟಿ**

ಸಿ.ಸಿ.ನಂ.616/2014

ಅಸಾಃ 1 (ಚಾಸಾ-5)

| | |
|---|---|
| ಹೆಸರು | ಸುಭಾಸ ಮೂಡಲಗಿ |
| ತಂದೆಯ /ಗಂಡನ ಹೆಸರು | ಮಲ್ಲಪ್ಪ |
| ವಯಸ್ಸು | 55 ವರ್ಷ |
| ಉದ್ಯೋಗ | ಕಿರಾಣಿ ವ್ಯಾಪಾರ |
| ವಾಸಸ್ಥಳ | ರಬಕವಿ |

ದಿನಾಂಕ 14-10-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದಃ-**

ಚಾಸಾ-1 ಮತ್ತು 4 ರವರು ನನ್ನ ಅಣ್ಣ ಮತ್ತು ಅತ್ತಿಗೆ. ಚಾಸಾ-2, 3, 6 ರಿಂದ 10 ರವರು ನನಗೆ ಪರಿಚಯವಿರುತ್ತಾರೆ ಮತ್ತು ಆರೋಪಿತರ ಪರಿಚಯ ಇದೆ. ನನ್ನ ಅಣ್ಣನಾದ ಚಾಸಾ-1 ರವರದು ಒಂದು ಕಿರಾಣಿ ಅಂಗಡಿ ಇದ್ದು, ಅದರ ಸಿಟಿ ಎಸ್ ನಂ.1466 ಇರುತ್ತದೆ. ಸದರಿ ಆಸ್ತಿ ಸಲುವಾಗಿ ಚಾಸಾ-1 ಮತ್ತು ಆರೋಪಿತರ ಮಧ್ಯ ವಿವಾದ ಇದ್ದು, ಬನಹಟ್ಟಿ ನ್ಯಾಯಾಲಯದಲ್ಲಿ ಕಬ್ಜಾ ಸಲುವಾಗಿ ವಿವಾದ ಇತ್ತು. ಸದರಿ ಆಸ್ತಿ ಸಲುವಾಗಿ ನಮ್ಮ ಮತ್ತು ಆರೋಪಿತರ ಮಧ್ಯ ಮನಸಾ ಮನಸಾ ಸರಿ ಇರಲಿಲ್ಲ.

ಕಳೆದ 4-5 ತಿಂಗಳುಗಳ ಹಿಂದೆ ಆರೋಪಿತರು ಸದರಿ ಆಸ್ತಿಯ ಕುರಿತು ಚಾಸಾ-4 ರವರೊಂದಿಗೆ ತಕರಾರು ಮಾಡಿರುತ್ತಾರೆ. ಅಷ್ಟನ್ನು ಹೊರತುಪಡಿಸಿ ನನಗೆ ಬೇರೆ ಏನೂ ಗೊತ್ತಿರುವುದಿಲ್ಲ. ನಾನು ಈ ಬಗ್ಗೆ ಪೋಲಿಸರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ.

(ಈ ಹಂತದಲ್ಲಿ ಸಸಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ವಿನಂತಿಸಿದ್ದರಿಂದ ಅನುಮತಿಸಲಾಯಿತು)

**ಪಾಟೀಸವಾಲುಃ ಸಹಾಯಕ ಸರಕಾರಿ ಅಭಿಯೋಜಕರವರಿಂದಃ-**

ದಿನಾಂಕ 08-02-2013 ರಂದು ಬೆಳಿಗ್ಗೆ ನಾನು ಮನೆಯಲ್ಲಿದ್ದಾಗ ಚಾಸಾ-6 ರವರು ಬೆ.6 ಗಂಟೆಗೆ ನಮ್ಮ ಮನೆಗೆ ಬಂದು 1 ನೇ ಆರೋಪಿತನು ನಿಮ್ಮ ಅಣ್ಣನ ಅಂಗಡಿಯಲ್ಲಿದ್ದ ಕಿರಾಣಿ ಸಾಮಾನುಗಳನ್ನು ಹೊರಗಡೆ ಇಟ್ಟಿದ್ದಾನೆಂದು ತಿಳಿಸಿರುತ್ತಾರೆ, ಅಲ್ಲದೇ ಅಂಗಡಿಯ ಕೀಲಿ ಮುರಿದಿದ್ದಾರೆ ಅಂತಲೂ ಹೇಳಿದ್ದು, ನಂತರ ನಾನು ನಮ್ಮ ಅಣ್ಣನ ಮನೆಗೆ ಹೋಗಿ ತಿಳಿಸಿದ್ದು, ಅವರು ಬೆಳಗಾವಿಗೆ

ಹೋಗಿದ್ದರಿಂದ ಅವರಿಗೆ ಫೋನ್ ಮಾಡಿ ತಿಳಿಸಿದ್ದು, ಅವರು ಬಂದ ನಂತರ ನಾವೆಲ್ಲರೂ ಕೂಡಿ ನಮ್ಮ ಅಂಗಡಿಯ ಮುಂದೆ ಹೋದಾಗ ಆರೋಪಿತರೆಲ್ಲರೂ ನಮ್ಮ ಕಿರಾಣಿ ಅಂಗಡಿಯಲ್ಲಿದ್ದ ಸಾಮಾನುಗಳನ್ನು ಹೊರಗಡೆ ಇಟ್ಟಿದ್ದು, ಈ ಬಗ್ಗೆ ನಾವೆಲ್ಲರೂ ಏಕೆ ನಮ್ಮ ಕಿರಾಣಿ ಸಾಮಾನುಗಳನ್ನು ಹೊರಗಿಟ್ಟಿದ್ದೀರಿ ಎಂದು ಕೇಳಿದಾಗ ಆರೋಪಿತರೆಲ್ಲರೂ ಸದರಿ ಅಂಗಡಿ ನಮ್ಮದಿದೆ ಎಂದು ಹೇಳಿ ಅವಾಚ್ಯ ಶಬ್ದಗಳಿಂದ ಬೈದು, ನಿಮಗೆ ಜೀವಂತ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿದ್ದಲ್ಲದೇ, ನಮ್ಮ ಅಂಗಡಿಗೆ ಅಕ್ರಮ ಪ್ರವೇಶ ಮಾಡಿರುತ್ತಾರೆ ಅಂತಾ ಹೇಳಿ ಪೋಲಿಸರ ಮುಂದೆ ಹೇಳಿ ಬರೆಸಿದ್ದೇನೆಂದರೆ ಸರಿ.

<u>ಪಾಟೀಸವಾಲುಃ ಆರೋಪಿತರ ಪರ ಶ್ರೀ.ಎಸ್ ವ್ಹಿ ಜಿ ವಕೀಲರಿಂದ:-</u>

ನಾನು 10 ನೇ ತರಗತಿವರೆಗೆ ಶಾಲೆ ಕಲಿತಿದ್ದೇನೆ. ಪೋಲಿಸರು ನನ್ನ ಹೇಳಿಕೆ ಪಡೆದಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಆರೋಪಿತರು ನಮ್ಮ ಕಿರಾಣಿ ಅಂಗಡಿಯ ಸಾಮಾನುಗಳನ್ನು ಹೊರಗಡೆ ಇಟ್ಟಿದ್ದನ್ನು ನಾನು ನೋಡಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನಮ್ಮ ಅಂಗಡಿಯ ಕೀಲಿಯನ್ನು ರಾತ್ರಿ ಮುರಿದಿರುತ್ತಾರೆ. ನಮಗೆ ಬೆಳಿಗ್ಗೆ 6 ಗಂಟೆಗೆ ಈ ಬಗ್ಗೆ ಗೊತ್ತಾಗಿರುತ್ತದೆ. ಆರೋಪಿತರು ರಾತ್ರಿ ಕೀಲಿ ಮುರಿದಿದ್ದನ್ನು ನಾನು ಕಣ್ಣಾರೆ ಕಂಡಿಲ್ಲ. ಸಿವಿಲ್ ದಾವೆಯ ಆಸ್ತಿ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ಸಿಟಿ ಎಸ್ ನಂ.1466 ಇದು ಆರೋಪಿತರ ಹೆಸರಿನಲ್ಲಿದೆ ಎಂದರೆ ನನಗೆ ಗೊತ್ತಿಲ್ಲ. ಅದರ ಉತಾರ ನಾನು ನೋಡಿಲ್ಲ. ಸದರಿ ಆಸ್ತಿ ವಿಚಾರವಾಗಿ ಇದೇ ನ್ಯಾಯಾಲಯದಲ್ಲಿ 2 ದಾವೆ ಚಾಲ್ತಿಯಲ್ಲಿರುವ ಬಗ್ಗೆ ನನಗೆ ಗೊತ್ತಿಲ್ಲ. ನಮಗೂ ಮತ್ತು ಆರೋಪಿತರಿಗೂ ಮನಸಾ ಮನಸಾ ಸರಿ ಇಲ್ಲ ಎಂದರೆ ಸರಿ. ಆರೋಪಿತರು ನನ್ನ ಮೇಲೆ ಕ್ರಿಮಿನಲ್ ಕೇಸ್ ನಂ.654/2014 ನ್ನು ದಾಖಲಿಸಿದ್ದು, ಅದರಲ್ಲಿ ನಾನು 2 ನೇ ಆರೋಪಿ ಇರುತ್ತೇನೆ. ಫಿರ್ಯಾದುದಾರ ನನ್ನ ಅಣ್ಣ. ನನ್ನ ಅಣ್ಣ ದೂರಿನಲ್ಲಿ ಏನು ಬರೆದಿದ್ದಾರೆಂದು ನನಗೆ ಮಾಹಿತಿ ಇರುವುದಿಲ್ಲ. ಆರೋಪಿತರು ನಮಗೆ ಜೀವದ ಬೆದರಿಕೆ ಹಾಕಿ ಅವಾಚ್ಯ ಶಬ್ದಗಳಿಂದ ಬೈದರು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಮ್ಮ ಕಿರಾಣಿ ಅಂಗಡಿ ರಬಕವಿಯ ಬಜಾರನಲ್ಲಿ ಇದೆ ಎಂದರೆ ಸರಿ. ಅಂಗಡಿ ಕಬಳಿಸಲು ಆರೋಪಿತರ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿತರು ಘಟನೆಯ ದಿನ ಯಾವುದೇ ಗುನ್ನೆ ಮಾಡಿಲ್ಲ, ಯಾವುದೇ ಸಾಮಾನುಗಳನ್ನು ಹೊರಗಡೆ ಇಟ್ಟಿಲ್ಲ ಎಂದರೆ ಸರಿಯಲ್ಲ. ನನ್ನ ಅಣ್ಣ ಫಿರ್ಯಾದುದಾರ ಆಗಿದ್ದರಿಂದ ಅವರಿಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು)
ಓದಿ ಹೇ. ಕೇ. ಸರಿ ಅದೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂ., ಬನಹಟ್ಟಿ.

**ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂಡಾಧಿಕಾರಿಗಳು, ಬನಹಟ್ಟಿ**

ಸಿ.ಸಿ.ನಂ.616/2014

ಅಸಾಃ 2 (ಚಾಸಾ-6)

| | |
|---|---|
| ಹೆಸರು | ಸುರೇಶ ಕೋಪರ್ಡೆ |
| ತಂದೆಯ /ಗಂಡನ ಹೆಸರು | ಗಣಪತಿ |
| ವಯಸ್ಸು | 70 ವರ್ಷ |
| ಉದ್ಯೋಗ | ವ್ಯಾಪಾರ |
| ವಾಸಸ್ಥಳ | ರಬಕವಿ |

ದಿನಾಂಕ 14-10-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದಃ-**

ನನಗೆ ಚಾಸಾ-1, 4 ಮತ್ತು 5 ರವರು ಮತ್ತು ಆರೋಪಿತರು ಪರಿಚಯ ಇರುತ್ತಾರೆ. ಕಳೆದ 8-9 ವರ್ಷಗಳ ಹಿಂದೆ ಬೆ.5 ಗಂಟೆ ಸುಮಾರಿಗೆ ನಾನು ಬಹೀರದಿಶೆಗೆ ಹೋಗುವ ಸಮಯದಲ್ಲಿ ಚಾಸಾ-1 ರವರ ಅಂಗಡಿಯಲ್ಲಿದ್ದ ದವಸಧಾನ್ಯಗಳು ಹೊರಗೆ ಇದ್ದದ್ದು ಕಂಡು ಬಂದಿರುತ್ತದೆ. ನಂತರ ನಾನು ಚಾಸಾ-1 ಮತ್ತು 5 ರವರ ಮನೆಗೆ ಹೋಗಿ ವಿಷಯ ತಿಳಿಸಿರುತ್ತೇನೆ. ಮುಂದೆ ಏನು ಆಯಿತು ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ಅಂಗಡಿಯಲ್ಲಿನ ದವಸಧಾನ್ಯಗಳನ್ನು ಯಾರು ಹೊರಗೆ ಹಾಕಿದ್ದಾರೆಂದು ನನಗೆ ಗೊತ್ತಿರುವುದಿಲ್ಲ, ಆದರೆ 6-7 ಜನರು ಇದ್ದು, ಕತ್ತಲಾಗಿದ್ದರಿಂದ ಅವರ ಹೆಸರು ಮತ್ತು ಮುಖ ಪರಿಚಯ ನನಗೆ ಇರುವುದಿಲ್ಲ. ಇದನ್ನು ಹೊರತುಪಡಿಸಿ ನನಗೆ ಬೇರೆ ಏನೂ ಗೊತ್ತಿಲ್ಲ. ಸದರಿ ಘಟನೆ ಬಗ್ಗೆ ನಾನು ಪೋಲಿಸರ ಮುಂದೆ ಹೇಳಿಕೆ ಕೊಟ್ಟಿರುವುದಿಲ್ಲ.

(ಈ ಹಂತದಲ್ಲಿ ಸಸಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ವಿನಂತಿಸಿದ್ದರಿಂದ ಅನುಮತಿಸಲಾಯಿತು)

**ಪಾಟೀಸವಾಲುಃ ಸಹಾಯಕ ಸರಕಾರಿ ಅಭಿಯೋಜಕರವರಿಂದಃ-**

ದಿನಾಂಕ 08-02-2013 ರಂದು ಬೆ.5 ಗಂಟೆ ಸುಮಾರಿಗೆ ಆರೋಪಿತರೆಲ್ಲರೂ ಸೇರಿ ಚಾಸಾ-1 ಅಂಗಡಿಯ ಕೀಲಿ ಮುರಿದು, ಚಾಸಾ-1 ರವರ ಅಂಗಡಿಯಲ್ಲಿದ್ದ ಕಿರಾಣಿ ಸಾಮಾನುಗಳನ್ನು ಹೊರಗೆ ಹಾಕಿದ್ದರು ಎಂದರೆ ಸರಿ. ಈ ವಿಷಯವನ್ನು ನಾನು ಚಾಸಾ-5 ರವರ ಮನೆಗೆ ಹೋಗಿ ಹೇಳಿದ್ದು, ಅವರು ಚಾಸಾ-1 ರವರ ಮನೆಗೆ ಹೋಗಿದ್ದಾಗ, ಅವರು ಮನೆಯಲ್ಲಿ ಇರದ ಕಾರಣ ಅವರಿಗೆ ಫೋನ್ ಮುಖಾಂತರ ಸದರಿ ವಿಷಯ ತಿಳಿಸಿದ್ದರು ಎಂದರೆ ಸರಿ. ನಂತರ ಅವರಿಬ್ಬರೂ ಅಂಗಡಿ ಹತ್ತಿರ ಬಂದು

ಆರೋಪಿತರನ್ನು ಸಾಮಾನುಗಳನ್ನು ಏಕೆ ಹೊರ ಹಾಕಿದ್ದೀರಿ ಎಂದು ಕೇಳಿದಾಗ, ಆರೋಪಿತರು ಅಂಗಡಿ ನಮ್ಮದಿದೆ ಎಂದು, ಅವರು ಚಾಸಾ-1 ರವರ ಅಂಗಡಿಯ ಕೀಲಿ ಮುರಿದು ಅಕ್ರಮ ಪ್ರವೇಶ ಮಾಡಿ ಅಲ್ಲಿದ್ದ ಸಾಮಾನುಗಳನ್ನು ಹೊರ ಹಾಕಿದ್ದರು ಮತ್ತು ಅವರಿಗೆ ಅವಾಚ್ಯ ಶಬ್ದಗಳಿಂದ ಬೈದು ಜೀವ ಬೆದರಿಕೆ ಹಾಕಿದರು ಎಂದರೆ ಸರಿ. ಈ ಬಗ್ಗೆ ನಾನು ಪೋಲಿಸರ ಮುಂದೆ ನನ್ನ ಹೇಳಿಕೆ ಕೊಟ್ಟಿರುತ್ತೇನೆ.

**<u>ಪಾಟೀಸವಾಲುಃ ಆರೋಪಿತರ ಪರ ಶ್ರೀ.ಎಸ್ ವ್ಹಿ ಜಿ ವಕೀಲರಿಂದ:-</u>**

ನಾನು 5 ನೇ ತರಗತಿವರೆಗೆ ಶಾಲೆ ಕಲಿತಿದ್ದೇನೆ. ಘಟನೆ ನಡೆದ ಮರುದಿನ ಪೋಲಿಸರು ನನ್ನ ಹೇಳಿಕೆ ತೆಗೆದುಕೊಂಡರು. ಗುನ್ಹಾ ನಡೆದ ದಿನಾಂಕ ನನಗೆ ಹೇಳಲು ಬರುವುದಿಲ್ಲ. ನನ್ನ ರಬಕವಿಯಲ್ಲಿರುವ ಸ್ವೀಟ್ ಮಾರ್ಟ್ ಅಂಗಡಿಯ ಸಿಟಿ ಎಸ್ ನಂಬರ್ ಇರುವುದಿಲ್ಲ. ನಾನು ರಸ್ತೆ ಮೇಲೆ ಅಂಗಡಿ ಹಾಕಿದ್ದೇನೆ. ನನ್ನ ಹೇಳಿಕೆ ಪಡೆದ ಪೋಲಿಸರ ಹೆಸರು ನನಗೆ ಹೇಳಲು ಬರುವುದಿಲ್ಲ. ಚಾಸಾ-1 ರವರು ತನ್ನ ದೂರಿನಲ್ಲಿ ಏನು ಬರೆಸಿದ್ದಾರೆಂದು ನನಗೆ ವೈಯಕ್ತಿಕ ಮಾಹಿತಿ ಇಲ್ಲ. ಮುಂಜಾನೆ 5 ಗಂಟೆಗೆ ಕತ್ತಲಿರುತ್ತದೆಂದರೆ ಸರಿ. ನನಗೆ ಅಂಗಡಿಯ ಕೀಲಿ ಯಾರು ಮುರಿದಿದ್ದರು ಎಂದು ಗೊತ್ತಿಲ್ಲ. ಆದರೆ ಅಲ್ಲಿ 6-7 ಜನರು ಇದ್ದರು. ಅಂಗಡಿಯ ಮುಂದೆ ಬಿದ್ದಿದ್ದ ಕಾಳುಕಡಿಗಳನ್ನು ಫಿರ್ಯಾದುದಾರರೇ ತಂದು ತೋರಿಸಿದರು ಎಂದರೆ ಸರಿ. ಚಾಸಾ-1 ಮತ್ತು ಆರೋಪಿತರ ಮಧ್ಯ ಇರುವ ಸಿವಿಲ್ ವ್ಯಾಜ್ಯದ ಬಗ್ಗೆ ನನಗೆ ಮಾಹಿತಿ ಇಲ್ಲ. ಚಾಸಾ-1 ಮತ್ತು ಚಾಸಾ-5 ರವರು ನನಗೆ ಬಹಳ ಪರಿಚಯ ಇದ್ದಾರೆ. ಈ ಕೇಸಿನ ವೈಯಕ್ತಿಕ ಮಾಹಿತಿ ನನಗೆ ಇಲ್ಲ ಎಂದರೆ ಸರಿಯಲ್ಲ. ಅಂಗಡಿ ಬದಲು ಕೇಸ್ ನಡೆದಿರುವ ಬಗ್ಗೆ ಮಾತ್ರ ನನಗೆ ಗೊತ್ತಿದೆ. ಈ ಕೇಸ್ ಬಗ್ಗೆ ನನಗೆ ಏನೂ ಗೊತ್ತಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರಿಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು)
ಓದಿ ಹೇ. ಕೇ. ಸರಿ ಅದೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂ., ಬನಹಟ್ಟಿ.